# Andolana

**Date:** 10-02-2021 **Page No:** 5

**Edition:** Mysore **Language:** Kannada

# ಎಸ್‌ಡಿಎಂ-ಐಎಂಡಿಯಿಂದ ಬಜೆಟ್ ಬಗ್ಗೆ ವಿಶ್ಲೇಷಣೆ




ಮೈಸೂರು: ಕಾನ್ಫೆಡರೇಶನ್ ಆಫ್ ಇಂಡಿಯನ್ ಇಂಡಸ್ಟ್ರೀಸ್ (ಸಿಐಐ), ದಿ ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾದ (ಐಸಿಎಸ್‌ಐ) ಮೈಸೂರು ಅಧ್ಯಾಯದ ಸಹಯೋಗದಲ್ಲಿ ಎಸ್‌ಡಿಎಂ-ಐಎಂಡಿ ಜಂಟಿಯಾಗಿ ಕೇಂದ್ರ ಬಜೆಟ್ ಕುರಿತು ವಿಶ್ಲೇಷಣೆಯನ್ನು ವರ್ಚುವಲ್ ಮೂಲಕ ನಡೆಸಲಾಯಿತು.

ಎಸ್‌ಡಿಎಂಐಎಂಡಿ ನಿರ್ದೇಶಕ ಡಾ. ಎನ್.ಆರ್.ಪರಶುರಾಮನ್, ಸಿಐಐ ಮೈಸೂರಿನ ಅಧ್ಯಕ್ಷ ಅಮಿತ್ ಕುಮಾರ್, ಉಪಾಧ್ಯಕ್ಷ ಪವನ್ ರಂಗಾ, ಸಂಚಾಲಕ ಎಸ್.ರಂಗನಾಥ ಮತ್ತಿತರರನ್ನು ಒಳಗೊಂಡ ಪ್ಯಾನೆಲ್ ಸದಸ್ಯರು ಮಾತನಾಡಿ, ಕೇಂದ್ರ ಬಜೆಟ್ ಆರೋಗ್ಯ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಗಮನವನ್ನು ನೀಡುವ ಮೂಲಕ ಬೆಳವಣಿಗೆಯನ್ನು ಆಧರಿಸಿದೆ. ಶಿಕ್ಷಣ ಮತ್ತು ರಕ್ಷಣೆಯಂತಹ ಕೆಲವು ಕ್ಷೇತ್ರಗಳ ಬಗ್ಗೆ ಬಜೆಟ್‌ನ ಗಮನ ಸೀಮಿತವಾಗಿದೆ. ಎಂಎಸ್‌ಎಂಇಗಳು (ಸಣ್ಣ, ಅತಿ ಸಣ್ಣ ಹಾಗೂ ಮಧ್ಯಮ ಉದ್ಯಮಗಳು) ಬಜೆಟ್‌ನಲ್ಲಿ ಕಾಣೆಯಾಗಿದೆ ಎಂದು ಅಭಿಪ್ರಾಯಪಟ್ಟರು. ಸಾಂಕ್ರಾಮಿಕ ಅವಧಿಯಲ್ಲಿ ಘೋಷಿಸಲಾದ ಪ್ರಚೋದಕ ಪ್ಯಾಕೇಜಿನ ಗಣನೀಯ ಭಾಗವು ಎಂಎಸ್‌ಎಂಇಗಳ ಕಡೆಗೆ ಇರುವುದರಿಂದ ಎಂಎಸ್‌ಎಂಇಗಳ ಹೆಸರನ್ನು ಬಜೆಟ್‌ನಲ್ಲಿ ಉಲ್ಲೇಖಿಸಲಾಗಿಲ್ಲ ಎಂದು ಕೆಲವು ಪ್ಯಾನೆಲಿಸ್ಟ್‌ಗಳು ಅಭಿಪ್ರಾಯ ಪಟ್ಟರು. ಪಿಡಬ್ಲ್ಯುಸಿ (ಪ್ರೈಸ್ ವಾಟರ್‌ಹೌಸ್ ಕೂಪರ್ಸ್)ನ ಪಾಲುದಾರ ಗಣೇಶ್ ಕೃಷ್ಣಮೂರ್ತಿ, ಸಂದೇಶ್ ಕುಮಾರ್ ಮತ್ತು ಫನೀಲ್ ಶಾ ಅವರು ನೇರ ಮತ್ತು ಪರೋಕ್ಷ ತೆರಿಗೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಬಜೆಟ್‌ನ ಪ್ರಮುಖ ಲಕ್ಷಣಗಳನ್ನು ವಿಶ್ಲೇಷಿಸಿದರು. ಎಸ್‌ಡಿಎಂಐಎಂಡಿ ಸಹಾಯಕ ಪ್ರಾಧ್ಯಾಪಕ ಡಾ.ಎಂ.ಶ್ರೀರಾಮ್ ಸ್ವಾಗತಿಸಿದರು, ಹಣಕಾಸು ಮತ್ತು ತೆರಿಗೆ ಸಮಿತಿಯ ದೇವನಾಥನ್ ಕಾರ್ಯಕ್ರಮ ನಿರ್ವಹಿಸಿದರು.